ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com
ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

NO:B31/SE(IT&MIS)/EEE(NW&DC)/1402/20-21

ನಿಗಮ ಕಾರ್ಯಾಲಯ
ಕಾವೇರಿ ಭವನ,
ಬೆಂಗಳೂರು-560009,
ದಿನಾಂಕ:07.08.2020.

## ಸುತ್ತೋಲೆ

**ವಿಷಯ:** ಕವಿಪ್ರನಿನಿಯಲ್ಲಿ ಗಣಕಯಂತ್ರ ಹಾಗೂ ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸುವ ಬಗ್ಗೆ.

**ಉಲ್ಲೇಖ:** 1. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 46 ಇಆಇ 2013 ದಿನಾಂಕ:06.08.2013.
2. ಟಿಪ್ಪಣಿ ಸಂಖ್ಯೆ: ಬಿ31/ಅಇಂ(ಮಾತಂ&ಎಂಐಎಸ್)/ಕಾನಿಇಂ(ಎನ್.ಡಬ್ಲ್ಯೂ&ಡಿ.ಸಿ)/1402/2020-21ಯು ವ್ಯವಸ್ಥಾಪಕ ನಿರ್ದೇಶಕರಿಂದ ದಿ:29.07.2020ರಂದು ಅನುಮೋದಿಸಲ್ಪಟ್ಟಿದೆ.

**********

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 46 ಇಆಇ 2013 ದಿನಾಂಕ:06.08.2013ರಲ್ಲಿ ಗಣಕಯಂತ್ರ ಹಾಗೂ ಇತರೆ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸಲು ಹಾಗೂ ವಿಲೇವಾರಿ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವ ಈ ಕೆಳಕಂಡ ಮಾನದಂಡಗಳನ್ನು ಕವಿಪ್ರನಿನಿಯಲ್ಲಿ ಕೂಡ ಗಣಕಯಂತ್ರ ಹಾಗೂ ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪರಿಕರಗಳ ಜೀವತಾವಧಿಯನ್ನು ನಿರ್ಧರಿಸಲು ಹಾಗೂ ವಿಲೇವಾರಿ ಮಾಡಲು ಅನುಸರಿಸಬಹುದೆಂದು ನಿರ್ಣಯಿಸಲಾಯಿತು.

1. ಗಣಕ ಕ್ಷೇತ್ರದಲ್ಲಿ ತಾಂತ್ರಿಕತೆ ತೀವ್ರವಾಗಿ ಬದಲಾವಣೆಯಾಗುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು 20% ಸವಕಳಿಯೆಂದು ಪರಿಗಣಿಸಿ ಗಣಕಯಂತ್ರ ಯು.ಪಿ.ಎಸ್ ಹಾಗೂ ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪರಿಕರಗಳ ಜೀವತಾವಧಿಯನ್ನು ಕನಿಷ್ಠ 5 ವರ್ಷಗಳೆಂದು ಪರಿಗಣಿಸುವುದು.

2. ಗಣಕಯಂತ್ರ, ಯು.ಪಿ.ಎಸ್ ಹಾಗೂ ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪರಿಕರಗಳನ್ನು ಖರೀದಿಸಿ ಅಳವಡಿಸಿದ 5 ವರ್ಷಗಳ ನಂತರ, ರಿಪೇರಿ ಮಾಡಲು ಸಾಧ್ಯವಾಗದೇ ಇರುವ/ಹಾಳಾಗಿರುವ ಗಣಕಯಂತ್ರ ಮತ್ತು ಇತರೆ ಪರಿಕರಗಳನ್ನು ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸುವುದು.

3. ಟಿ.ಅಂಡ್.ಪಿ ಖಾತೆಯಲ್ಲಿರುವ ನಿರುಪಯುಕ್ತ ಗಣಕಯಂತ್ರ ಹಾಗೂ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಇತರ ಪರಿಕರಗಳ ವಿಲೆ ಮಾಡಬಹುದಾದ ವಿವರಗಳನ್ನು ಕ್ರೋಢಿಕರಿಸಿ, ಹೊಸದಾಗಿ ಖರೀದಿಸಲು ಉದ್ದೇಶಿಸಿರುವ ಕ್ರಿಯಾ ಯೋಜನೆಗಳನ್ನು ಕವಿಪ್ರನಿನಿಯಲ್ಲಿ ರಚಿಸಿರುವ ಗಣಕೀಕರಣದ ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆ ಪಡೆಯತಕ್ಕದ್ದು.

4. ನಿರುಪಯುಕ್ತ ವಸ್ತುಗಳೆಂದು ನಿರ್ಣಯಿಸಿದ ಗಣಕಯಂತ್ರ ಯು.ಪಿ.ಎಸ್ ಹಾಗೂ ಇತರೆ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಪರಿಕರಗಳನ್ನು

   (i) Buy Back ಅಥವಾ

   (ii) ಕವಿಪ್ರನಿನಿ ಸ್ಟೋರ್, ಕವಿಪ್ರನಿನಿ ರವರ ಕಛೇರಿಯಿಂದ ಇ-ವೇಸ್ಟ್‌ನ್ನು ವಿಲೇವಾರಿ ಮಾಡಲು ಭಾರತ ಸರ್ಕಾರ ನೀಡಿರುವ ಮಾರ್ಗಸೂಚಿಗಳಂತೆ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡುವುದು.

ಈ ಮೇಲಿನ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶಿಸಲಾಗಿದೆ.

ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರರು(ವಿ), ಕವಿಪ್ರನಿನಿ
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ
3. ಎಲ್ಲಾ ಅಧೀಕ್ಷಕ ಇಂಜಿನಿಯರರು(ವಿ)/ನಿಯಂತ್ರಣಾಧಿಕಾರಿ, ಕವಿಪ್ರನಿನಿ
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರರು(ವಿ)/ಉಪಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ

   ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.karnataka.gov.in/eprasarana ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.